ನಂಬರ್.	ಅಪ್ಪೀಲ್‌ವಾದಿಗಳು ಮತ್ತು ಅರ್ಜಿದಾರರ ಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಸ್ಪೆ. ಅ. ೪೯	ಕೃಷ್ಣರಾವ್ ..	ಮಹದೇವರಾವ್ ವಗೈರೆ ..	೩ನೇ ಸಪ್ಟಂಬರ್
ಕೊ. ಸ್ಪೆ. ಅ. ೩	ನಾರಣ್ಣಯ ..	ಕುಪ್ಪಮ್ಮ ..	ಡಿಟೋ
ಕ್ರಿ. ಪಿಟಿಷನ್ ೨೬	ದೊಡ್ಡವಲ್ಲೈಯ ವಗೈರೆ ..	.. ..	ಡಿಟೋ
ಕೊ. ರಿ. ಕೆ. ನಂ. ೩	ಕೆ. ವೆಂಕಟ್ಟೈಯ ..	ನಂಜುಂಡೈಯ ..	ಡಿಟೋ
ಅಪ್ಪೀಲ್ ೨	ಆರ್. ಶಿ. ಡಾಬಸ್ ಯಸ್‌ಕ್ವಯರ್ ..	ನರಶಿಮ್ಹಮೇಸ್ತ್ರಿ ವಗೈರೆ ..	೭ನೇ ಅಕ್ಟೋಬರ್
ಸ್ಪೆ. ಅ. ೫೬	ವೆಂಕಟರಾವ್ ..	ರಾಮೈಯ ..	೫ನೇ ಡಿಟೋ
ಸ್ಮಾ. ಕೋ ರಿ. ೫	ಮಾನುಮಿಯ ವಗೈರೆ ..	ಮುಸ್ತಫಖಾ ..	ಡಿಟೋ
ಸ್ಪೆ. ಅ. ೫೭	ಮಲ್ಲಯ್ಯ ..	ಮರಿದೇವೇಗೌಡ ..	೭ನೇ ಡಿಟೋ

J. D. GORDON, *Judl. Commr.*

ಪೊಲೀಸ್ ಇಲಾಖೆ.

ತಾರೀಖು 8ನೇ ಸಪ್ಟಂಬರ್ 1876.

ಚಿತ್ರದುರ್ಗ ಡಿಸ್ಟ್ರಿಕ್ಟ್ ಇನ್‌ಸ್ಪೆಕ್ಟರ್ ಸುಂದರಯ್ಯನವರಿಗೆ ಸೀಕ್ ಸರಟಿಫಿಕೇಟ್ ಮೇಲೆ 1876ನೇ ಇಸವೀ ಸಪ್ಟಂಬರ್ 5ನೇ ತಾರೀಖು ಲಗಾಯತು ಯರಡು ತಿಂಗಳ ಜಾಸ್ತೀ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 13ನೇ ಸಪ್ಟಂಬರ್ 1876.

ಬೆಂಗಳೂರು ಡಿಸ್ಟ್ರಿಕ್ಟ್ ಸಬ್ ಇನ್‌ಸ್ಪೆಕ್ಟರ್ ಮಹಮ್ಮದ್ ಪೀರುಯವರಿಗೆ ಮಾಹೇ ಮಜಕೂರು 3ನೇ ಮುಕ್ತಂ ಲಗಾಯಿತು ಬಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕ್ಕುಂ,"

W. PORTEOUS,
Offg. Dy. Inspector General of Police.

ಸರ್ವೇ ವ ಸೆಟಿಲ್‌ಮೆಂಟ್ ಇಲಾಖೆ.

ತಾರೀಖು 11ನೇ ಸಪ್ಟಂಬರ್ 1876.

ಮೈಸೂರು ರೆವಿನ್ಯೂ ಸರ್ವೇ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಕೆಪ್ಟ್ ಕೊವಿಯವರು ಸ್ ೧೮೭೬ನೇ ಇಸವಿ 19ನೇ ಮುಕ್ತಂ ಮೈಸೂರು ಗೆಜೆಟಿನಲ್ಲಿ ಫಾಯಿಷ್ ಮಾಡಲ್ಪಟ್ಟ ಅದೇ ಸಾಲ್ ಮಾಹೆ 14ನೇ ಮುಕ್ತಂ 182ನೇ ನಂಬರ್ ಇಸ್ತಿಹಾರಿನಲ್ಲಿ ಅವರಿಗೆ ಕೊಡಲ್ಪಟ್ಟ ಯರಡು ತಿಂಗಳ ಪ್ರಿವಿಲೀಜ್ ರಜಾವನ್ನು 1876ನೇ ಇಸವಿ ಸಪ್ಟಂಬರ್ 4ನೇ ಮುಕ್ತಂ ಮ್ಯಾನ್ಹಡ್ಡಕ್ಕೆ ಉಪಯೋಗಿಸಿ ಕೊಂಡರು.

W. C. ANDERSON,
Survey & Settlement Commr., Mysore.

ಫಾರೆಸ್ಟ್ ಇಲಾಖೆ.

ಇಸ್ತಿಹಾರ್.

ತಾರೀಖು 25ನೇ ಅಗಸ್ಟ್ 1876.

ಮೈಸೂರು ವ ಕೊಡಗು ಸೀಮೆಗಳಲ್ಲಿ ಉತ್ಪತ್ತಿಯಾದ ಬಾಬತು ಸಂದಲ್‌ಮರದ ಸಾಲೀಯಾನಾ ಹರಾಜ್‌ಗಳು ಈ ಕೆಳಗೆ ಕಂಡ ತಾರೀಖುಗಳೊಳಗೂ ಸ್ಥಳಗಳಲ್ಲಿಯೂ ನಡಿಸಲ್ಪಡುವವು.

ಕವಲೇದುರ್ಗ, 4ನೇ ಅಕ್ಟೋಬರ್ 1876.		
ಶಿವಮೊಗ್ಗಾ, 16ನೇ „ „	}	ಹೆಚ್ಚು ಕಡಮೆ 200 ಟ್ಯಗಳ ವಜನಿ.
ಸಾಗರ, 25ನೇ „ „		
ಹುಣಸೂರು, 4ನೇ ನವಂಬರ್ 1876	}	ಹೆಚ್ಚು ಕಡಮೆ 560 ಟ್ಯಗಳ ವಜನಿ.
ಶ್ರೀರಂಗಪಟ್ಟಣ, 8ನೇ „ „		
ಬೆಂಗಳೂರು, 1ನೇ ಡಿಸಂಬರ್ „		ಹೆಚ್ಚು ಕಡಮೆ 100 ಟ್ಯಗಳು.
ಫ್ರೆಜರ್‌ಪೇಟೆ 18ನೇ „ „		80 „

ಹರಾಜ್‌ನಿಬಂಧನೆ—ಹರಾಜ್‌ಮೊಬಲಗ್ ಪೈಕೀ ಸೇಕಡಾ ಇಪ್ಪತ್ತೈದು ಪ್ರಕಾರ, ಹರಾಜ್ ತಾರೀಖು ಲಗಾಯತು ಮೂರುದಿನ ಗಳೊಳಗಾಗಿ ಪಾವತೀಮಾಡತಕ್ಕದ್ದು. ಬಾಕೀಮೊಬಲಗನ್ನು ಹರಾಜ್‌ತಾರೀಖುಮೊದಲು 90 ದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಇತರ ಷರತ್ತುಗಳೂ ದಂಡಗಳೂ 1874ನೇ ನವೆಂಬರ್ 28ನೇ ಮುಕ್ತಂ 47ನೇ ನಂಬರು ಮೈಸೂರು ಗಜೆಟ್‌ನಲ್ಲಿ ಕಾಣಬರುವದು. ಹರಾಜ್ ಆರಂಭವಾಗುವದಕ್ಕೆ ಮುಂಚಿತವಾಗಿ ಪ್ರತಿ ಕೋಠೀಬಳಿಯಲ್ಲೂ ಸದರೀ ನಿಬಂಧನೆಗಳು ಓದಲ್ಪಡುವವು. ಅಂತಾ ನಿಬಂಧನೆಗಳ ದೆಸೆಯಿಂದ ದರೋಬಸ್ತು ದರಖಾಸ್ತುದಾರರೂ ಬದ್ಧರಾಗತಕ್ಕದ್ದು.

ಷರಾ—ವರ್ತಕರ ಅನುಕೂಲಕ್ಕೋಸ್ಕರ ಹುಣಸೂರು ಶ್ರೀರಂಗಪಟ್ಣ ಈ ಉಭಯಸ್ಥಳಗಳ ಆಸ್‌ಪಾಸ್ ಕೋಠೀಗಳಲ್ಲಿ ಯ ಹರಾಜ್‌ಗಳು ನವಂಬರ್ 8ಕ್ಕೆ ಖೈದಾಗುವಂತೆ ನಡಿಸಲ್ಪಡುವದು. ಹುಣಸೂರು ಕೋಠೀಯಲ್ಲಿ ಕ್ರಯಮಾಡಲ್ಪಟ್ಟ ಮರಕ್ಕೆ ಕೊಡತಕ್ಕ ಸೇಕಡಾ ಇಪ್ಪತ್ತೈದು ಬಾಬತು ಡಿಪಾಜಿಟ್ ಮೊಬಲಗ್ ಸದರೀ ಮೇರೆ ಶ್ರೀರಂಗಪಟ್ಣ ಕೋಠೀಯಬಗೆ ಡಿಪಾಜಿಟ್ ಸಲ್ಲಬೇಕಾದಕಾಲಕ್ಕೆ ಸಮನಾಗಿ ಅಂದರೆ 1876ನೇ ನವಂಬರು 11ನೇ ಮುಕ್ತಂ ಸಾಯಂಕಾಲ 4 ಘಂಟೆಗೆ ಮುಂದಾಗಿಯೇ ಸಲ್ಲಬೇಕಾಗುತದೆ. ಸದರೀ ಉಭಯ ಹರಾಜ್‌ಗಳ ಬಾಬತು ಪೂರಾಮೊಬಲಗ್ 1877ನೇ ಇಸವೀ ಫೆಬ್ರವರಿ 6ನೇ ಮೆರ್ಕ್ಕಂ ಸಾಯಂಕಾಲ 4 ಘಂಟೆಗೆ ಮುಂದಾಗಿ ಸಲ್ಲಬೇಕಾಗುತ್ತೆ.

ವಿಕ್ರಯಿಸಲ್ಪಡುವ ದರೋಬಸ್ತು ಮರವೂ ವಿಕ್ರಯಿಸಲ್ಪಟ್ಟು, ಇದುವರಿಗೆ ನಡೆಯುತಿದ್ದ ಹಾಗೆ, ಖಂಡಿ, ಮಣ, ಶೇರು, ತೊಲೆ, ಪ್ರಕಾರ ತೂಕವಾಗುವದಕ್ಕೆ ಬದಲಾಗಿ ಬ್ರಿಟಿಸ್, ಪಾಂಡ್, ಹಂಡ್ರೆಡ್ ವೆಯಿಟ್ ಟ್ಯಗಳ ಮೇರೆ ತೂಕ ಮಾಡಿಕೊಡಲ್ಪಡುವದು.

G. J. VAN SOMEREN, *Captain,*
Conservator of Forests, Mysore & Coorg.

BANGALORE DISTRICT.

Notice of an application by Krishnasetti for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಕೋರ್ಟಿನಿಂದ.

ಸಕ್ರ 1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂ. 72.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಕಾರ್ಖಾನಹಳ್ಳಿ ಕಸಬೇಯಲ್ಲಿ ಯಿರುವ ಕಂತಿನ ಕೃಷ್ಣಶೆಟ್ಟಿ ಯಂಬುವನು ತನ್ನ ಅಂಣ ತಮ್ಮಂದಿರು ಸಂಜೀವಶೆಟ್ಟಿ ಹನುಮಯ್ಯನ ಲೇಣಿ 1000 ರೂಪಾಯಿ ಬರಮಾಡಿ ಕೊಳ್ಳತಕ್ಕಬಗ್ಗೆ ಸಕ್ರ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಸಪ್ಟಂಬರ್ 29ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗಿನಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿ ಕೊಡಬಹುದು.

Notice of an application by Narsumhaiya for a certificate under Act XXVII of 1860.

ಸಕ್ರ 1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂಬರ್ 73.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಬೆಂಗಳೂರು ಕಸಬೇಯಲ್ಲಿ ಇರುವ ತರಗಿನ ಮುಂಡೀ ನರಸುಹ್ಮಯ್ಯನು ತನ್ನ ತಂದೆ ನರಸಪ್ಪನ ಲೇಣಿ 1000 ರೂಪಾಯಿ ಬರಮಾಡಿ ಕೊಳ್ಳತಕ್ಕಬಗ್ಗೆ ಸಕ್ರ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಅಕ್ಟೋಬರ್ 2ನೇ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಸೆ ಆಗಲ್ಪಡುತ್ತೆಯಾಗಿ ಆ ಮೊಬಲಗಿನಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾ ತಮ್ಮ ಹಕ್ಕನ್ನ ಸ್ಥಾಪಿಸಿ ಕೊಡಬಹುದು.

ಬತಾರೀಖು 4ನೇ ಮಾಹೇ ಸಪ್ಟಂಬರ್ 1876ನೇ ಇಸವಿ—ಮೊಕ್ಕಾಂ ಬೆಂಗಳೂರು.

L. RICKETT
Offg. Dy.